12) ಕರ್ನಾಟಕ ಲೋಕಸೇವಾ ಆಯೋಗದವರು ೮೭ರಲ್ಲಿ ಆಯ್ಕೆ ಮಾಡಿದ ೨೧ ಮನವಿಯನ್ನು ತಕ್ಷಣ ನೇಮಿಸಲು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಕರ್ನಾಟಕ ಲೋಕಸೇವಾ ಆಯೋಗದವರು ೧೯೮೭ರಲ್ಲಿ ಆಯ್ಕೆ ಮಾಡಿ ಪ್ರಕಟಿಸಿದ ಪ್ರಥಮ ದರ್ಜೆ ಗುಮಾಸ್ತರ ೨೧ ಮಂದಿಯ ಪಟ್ಟಿಯನ್ನ ಬೆಳಗಾವಿಯ ಜಿಲ್ಲಾಧಿಕಾರಿಯವರ ಕಚೇರಿಗೆ ನೇಮಿಸಿ ೧೯೮೭ರ ಡಿಸೆಂಬರ್ ಮಾಹೆಯಲ್ಲಿ ಅವರಿಗೆ ಕಳುಹಿಸಿಕೊಟ್ಟಿದ್ದರು. ಈ ಬಗ್ಗೆ ಜಿಲ್ಲಾಧಿಕಾರಿಯವರು ಅವರ ಕಚೇರಿಯಲ್ಲಿ ಜಾಗವಿಲ್ಲವೆಂದು ಸದರಿ ಪಟ್ಟಿಯನ್ನು ಲೋಕಸೇವಾ ಆಯೋಗಕ್ಕೆ ಹಿಂದಿರುಗಿಸಿರುವುದಾಗಿ ರಾಜೇಂದ್ರ ಆರ್. ಕೊಡಗೂಳಿ, ೧೯ ಸಂಭಾಷ್ ಹೌಸಿಂಗ್ ಕಾಲೋನಿ ಬಿಜಾಪುರ ಇವರಿಗೆ ತಿಳಿಸಿರುವುದಾಗಿ ತಿಳಿದುಬಂದಿದೆ. ನಂತರ ಸದರಿ ರಾಜೇಂದ್ರ ಅವರು ಲೋಕಸೇವಾ ಆಯೋಗದ ಕಾರ್ಯದರ್ಶಿಯವರನ್ನು ಭೇಟಿಯಾದ ನಂತರ ಮೇಲ್ಕಂಡ ೨೧ ಜನರಿಗೂ ಬೆಳಗಾವಿಯ ಕಂದಾಯ ಇಲಾಖೆಯಲ್ಲಿಯೇ ನೇಮಕಾತಿ ಕೊಡಿಸುವುದಾಗಿ ತಿಳಿಸಿದ್ದರು. ಆದರೆ ಬೆಳಗಾವಿಯ ಜಿಲ್ಲಾಧಿಕಾರಿಗಳು ಅವರ ಕಚೇರಿಯಲ್ಲಿದ್ದ ಜಾಗಗಳಿಗೆ ಬಡ್ತಿ ನೀಡಿದ್ದರಿಂದಾಗಿ ಅಲ್ಲಿ ಯಾವ ಜಾಗವೂ ಖಾಲಿ ಇಲ್ಲ ಎಂಬುದಾಗಿ ಲೋಕಸೇವಾ ಆಯೋಗದವರಿಗೆ ತಿಳಿಸಿರುವುದಾಗಿ ಪತ್ರಿಕೆಯಲ್ಲಿ ಸ್ಪಷ್ಟೀಕರಣ ನೀಡಿದ್ದರು. ಇವರ ಜೊತೆಯಲ್ಲಿ ನೇಮಕಗೊಂಡ ಇತರ ಅಭ್ಯರ್ಥಿಗಳು ಈಗಾಗಲೇ ಕೆಲಸ ಮಾಡುತ್ತಿದ್ದು ಈ ೨೧ ಜನರು ಉದ್ಯೋಗವಿಲ್ಲದೆ ತೊಂದರೆಪಡುತ್ತಿರುವುದರಿಂದ ಸರಕಾರದವರು ಈ ಬಗ್ಗೆ ಲೋಕಸೇವಾ ಆಯೋಗದವರಿಗೆ ನಿರ್ದೇಶಿಸಿ ಮೇಲ್ಕಂಡ ೨೧ ಜನರನ್ನು ಕಲಡಲೇ ಯಾವುದಾದರೂ ಇಲಾಖೆಗೆ ನೇಮಕ ಮಾಡುವಂತೆ ಆದೇಶ ನೀಡಬೇಕೆಂದು ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ಸೆಪ್ಟೆಂಬರ್ ೧೯೮೭ ರಂದು ಬೆಳಗಾವಿ ಜಿಲ್ಲಾಧಿಕಾರಿಯವರಿಂದ ಲೋಕಸೇವಾ ಆಯೋಗಕ್ಕೆ ಬಂದ ಕೋರಿಕೆಯ ಪ್ರಕಾರ ಆ ಜಿಲ್ಲೆಯಲ್ಲಿ ೨೧ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ನೇರ ನೇಮಕಾತಿಯಿಂದ ತುಂಬುವುದಕ್ಕಾಗಿ ಲಭ್ಯವಿದ್ದವು ಮತ್ತು ಆದರಂತೆ ೨೧ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಕಳುಹಿಸಬೇಕೆಂದು ಆಯೋಗಕ್ಕೆ ಜಿಲ್ಲಾಧಿಕಾರಿಯವರು ಕೋರಿದ್ದರು. ಆಯ್ಕೆ ಮಾಡಬೇಕಾದ ೨೧ ಅಭ್ಯರ್ಥಿಗಳಲ್ಲಿ ಹಿಂದುಳಿದ ಅಭ್ಯರ್ಥಿಗಳಲ್ಲಿ ಯಾವಯಾವ ಪ್ರವರ್ಗಗಳ ಎಷ್ಟು ಇರಬೇಕೆಂಬುದನ್ನು ಸಹ ಜುಲೈ ೧೯೮೭ ರಲ್ಲಿ ಬೆಳಗಾಂ ಜಿಲ್ಲಾಧಿಕಾರಿಯವರ ಇಚ್ಛೆಯ ಪ್ರಕಾರ ೨೧ ಅಭ್ಯರ್ಥಿಗಳ ಯಾದಿಯನ್ನು ಆಯೋಗವು ಕಳುಹಿಸಿತು.

ದಿನಾಂಕ ೨೯-೩-೧೯೮೮ ರಂದು ಕರ್ನಾಟಕ ರೆವಿನ್ಯೂ ಸಬಾರ್ಡಿನೇಟ್ ಬ್ರಾಂಚ್ (ರಕ್ರೂಟ್ ಮೆಂಟ್) ರೂಲ್ಸ್, ೧೯೮೭ಕ್ಕೆ ಸರ್ಕಾರ ಮಾಡಿದ ತಿದ್ದುಪಡಿಯ ಪ್ರಕಾರ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನೇರ ನೇಮಕಾತಿಯ ಅವಕಾಶವನ್ನು ಒಂದು ವರ್ಷದ ಮಟ್ಟಿಗೆ ರದ್ದುಗೊಳಿಸಲಾಯಿತು. ಆದರಿಂದಾಗಿ ಡಿಸೆಂಬರ್ ೧೯೮೭ ರಲ್ಲಿ ಆಯೋಗವು ಕಳುಹಿಸಿದ ಅಭ್ಯರ್ಥಿಗಳ ಪಟ್ಟಿಯಿಂದ ನೇರ ನೇಮಕಾತಿ ಮಾಡಲು ಸಾಧ್ಯವಿಲ್ಲವೆಂದು ದಿನಾಂಕ ೨೨-೪-೧೯೮೮ ರಂದು ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ. ಆಯೋಗವು ಜಿಲ್ಲಾಧಿಕಾರಿಯವರೇ ನೇರ ನೇಮಕಾತಿ ಮಾಡಬೇಕೆಂದು ಕೋರಿ ಅಭ್ಯರ್ಥಿಗಳ ಪಟ್ಟಿಯನ್ನು ಹಿಂತಿರುಗಿಸಿದೆ. ಜಿಲ್ಲಾಧಿಕಾರಿಯವರು ಸರಕಾರದಿಂದ ಮಾರ್ಗದರ್ಶನ ಕೋರಿದ್ದಾರೆ.

ಮೇಲೆ ಹೇಳಿರುವ ಬೆಳವಣಿಗೆಯ ಹಿನ್ನೆಲೆಯಲ್ಲಿ ಈ ಬಗ್ಗೆ ಸರ್ಕಾರವು ಸಮಸ್ಯೆಯನ್ನು ತೀವ್ರವಾಗಿ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುವುದು. ಅಭ್ಯರ್ಥಿಗಳನ್ನು ಬೇರೆ ಇಲಾಖೆಗೆ ಹಂಚುವ ಬಗ್ಗೆಯೂ ಪರಿಶೀಲಿಸಿ ತದನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

13) ಮಂಗಳೂರು, ಹಾಸನ ಮೂಲಕ ಬೆಂಗಳೂರಿಗೆ ಇರುವ ರೈಲು ಸಂಚಾರಕ್ಕೆ ಹೆಚ್ಚಿನ ರೈಲುಗಳನ್ನು ಹಾಕುವಂತೆ ಕೇಂದ್ರವನ್ನು ಒತ್ತಾಯಿಸುವುದರ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ. ಡಿ. ಸೋಜ.— ಮಾನ್ಯ ಅಧ್ಯಕ್ಷರೆ, ಮಂಗಳೂರಿನಿಂದ ಹಾಸನ ಮೂಲಕ ಬೆಂಗಳೂರಿಗೆ ರೈಲು ಪ್ರಯಾಣ ಬಹಳ ಜನಪ್ರಿಯ ಆಗಿದೆ. ಜನರಿಗೆ ಉಪಕಾರಿಯೂ ಆಗುತ್ತದೆ. ಆದ್ದರಿಂದ ವಿಪರೀತ ಬೇಡಿಕೆ. ೧೫ ದಿನಕ್ಕೆ ಮೊದಲೇ ಟಿಕೆಟ್ ಬುಕ್ ಆಗಿ ಬಿಡುತ್ತದೆ.